ಕೊರಟಗೆರೆ ತಾಲ್ಲೂಕಿನಲ್ಲಿ ಇತ್ಯರ್ಥವಾಗದ ಭೂ ದಾವೆಗಳು

620 (639) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಭೂ ಇತ್ಯರ್ಥವಾಗದ ದಾವೆಗಳ ಸಂಖ್ಯೆ ಎಷ್ಟು; ಕಾನೂನು ಬದ್ಧವಾಗಿ ಸುಮಾರು 25-30 ವರ್ಷಗಳಿಂದಲೂ ಬಡ ರೈತಾಪಿ ವರ್ಗದವರು ಸ್ವಾಧೀನಾನುಭವದ ಜಮೀನಿನಲ್ಲಿ ಉಳುಮೆ ಮಾಡುತ್ತಾ ಬಂದಿದ್ದು, ಇವರ ಜಮೀನಿನ ದಾವೆಯು ಇತ್ಯರ್ಥವಾಗದೇ ಸಂಕಷ್ಟದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಶೀಘ್ರಗತಿಯಲ್ಲಿ ಇತ್ಯರ್ಥ ಮಾಡದ ಹಾಗೂ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡದ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಉಚ್ಚ ನ್ಯಾಯಾಲಯದಿಂದ ಮರು ವಿಚಾರಣೆಗೆ ಇತ್ತೀಚೆಗೆ 58 ಪ್ರಕರಣಗಳು ಬಂದಿರುತ್ತದೆ. ಅದರಲ್ಲಿ ಭೂ ನ್ಯಾಯ ಮಂಡಳಿ 20 ಪ್ರಕರಣಗಳನ್ನು ಇತ್ಯರ್ಥಗೊಳಿಸಿದ್ದು 38 ಪ್ರಕರಣಗಳು ಬಾಕಿ ಇರುತ್ತದೆ.

ಆ) ಬಾಕಿ ಉಳಿದ ಎಲ್ಲ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಕಾನೂನು ರೀತಿ ವಿಲೇವಾರಿ ಮಾಡಲು ಸೂಚನೆಗಳನ್ನು ನೀಡಲಾಗಿದೆ.

ಕೊರಟಗೆರೆ ತಾಲ್ಲೂಕು ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆ ದುರಸ್ತಿ

621 (640) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕಿನ ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೆ ಬರುವ ರಸ್ತೆಗಳು ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ಸಂಚಾರಕ್ಕೂ ಯೋಗ್ಯವಲ್ಲದ ರಸ್ತೆಯಾಗಿದ್ದು, ಈ ರಸ್ತೆಯ ದುರಸ್ತಿ ಹಾಗೂ ಡಾಂಬರೀಕರಣಕ್ಕಾಗಿ ಅನುದಾನ ಮಂಜೂರು ಮಾಡಲು ಕೋರಿದ್ದರೂ ಇದುವರೆವಿಗೂ ಹಣ ಮಂಜೂರಾಗದೇ ರಸ್ತೆಯ ದುರಸ್ತಿ ಕಾರ್ಯವು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳ ದುರಸ್ತಿ ಕಾರ್ಯವನ್ನು ಯಾವ ಯಾವ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡು ಪೂರೈಸಲಾಗುವುದು; ಇದಕ್ಕೆ ತಗಲುವ ಅಂದಾಜು ಎಷ್ಟು;

ಇ) ಈ ರಸ್ತೆಗಳ ದುರಸ್ತಿಗೆ ಅನುದಾನ ಮಂಜೂರು ಮಾಡಿ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರವು ಕೈಗೊಳ್ಳಲು ಕ್ರಮವೇನು?

ಈ) ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಬರುವ 40.10 ಕಿಮೀ ನ ರಾಜ್ಯ ಹೆದ್ದಾರಿಯ ಪೈಕಿ 21.72 ಕಿ.ಮೀ ಯನ್ನು ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆ ಅಡಿ

ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ. ಬಾಕಿ ಉಳಿದ 18.38 ಕಿಮೀ ರಸ್ತೆಯನ್ನು ಗುಂಡಿ ತುಂಬಿ ಸಂಚಾರಕ್ಕೆ ಯೋಗ್ಯವಾಗಿಡಲಾಗುವುದು.

ಆ) ರಾಜ್ಯ ಹೆದ್ದಾರಿಗಳನ್ನು 3 ವರ್ಷ ನಿರ್ವಹಣೆಯ ಯೋಜನೆ ಅಡಿಯಲ್ಲಿ ಉಸ್ತುವಾರಿ ಮಾಡಲಾಗುತ್ತಿದೆ. ಜಿಲ್ಲಾ ಮುಖ್ಯ ರಸ್ತೆಗಳನ್ನು ವಾರ್ಷಿಕ ನಿರ್ವಹಣೆಯಡಿಯಲ್ಲಿ ದುರಸ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಒಟ್ಟು 13.25 ಲಕ್ಷಗಳ ಮೊತ್ತವನ್ನು ನಿಗದಿಪಡಿಸಿದ್ದು, ಇದರಲ್ಲಿ ಇದುವರೆಗೆ 5.72 ಲಕ್ಷ ರೂ. ವೆಚ್ಚವಾಗಿರುತ್ತದೆ. ಹಾಗೂ ರಸ್ತೆಗಳ ವಾಹನ ಸಂಚಾರಕ್ಕೆ ಸುಗಮವಾಗಿಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಲಭ್ಯತೆಯ ಅನುಸಾರ ಅನುದಾನ ಒದಗಿಸಿ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

ಕೊರಟಗೆರೆ ತಾಲ್ಲೂಕಿನಲ್ಲಿ ಅರಣ್ಯ ಭೂಮಿ ಒತ್ತುವರಿ

622 (641) ಶ್ರೀ ಚಿನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕಿನ ಅರಣ್ಯ ಭೂಮಿಯ ವಿಸ್ತಾರವೆಷ್ಟು; ಈ ಅರಣ್ಯದಲ್ಲಿ ಯಾವ ಯಾವ ಮರಗಳನ್ನು ಬೆಳೆಯಲಾಗಿದೆ;

ಆ) ಕಳೆದ ಮೂರು ವರ್ಷಗಳ ಹಿಂದೆ ಅರಣ್ಯ ಭೂಮಿಯ ಕಟಾವು ಮಾಡಿದ ಮರಗಳ ಸಂಖ್ಯೆ ಎಷ್ಟು; ಇವುಗಳಿಂದ ಸರ್ಕಾರಕ್ಕೆ ಸಂದಾಯವಾದ ಆದಾಯವೆಷ್ಟು; (ವಿವರ ಒದಗಿಸುವುದು)

ಇ) ಕೊರಟಗೆರೆ ತಾಲ್ಲೂಕಿನಲ್ಲಿ ರೈತಾಪಿ ವರ್ಗದವರು ಒತ್ತುವರಿ ಮಾಡಿಕೊಂಡಿರುವ ಅರಣ್ಯ ವಿಸ್ತೀರ್ಣದ ಸಂಖ್ಯೆ ಎಷ್ಟು; (ಎಕರೆವಾರು, ಗ್ರಾಮವಾರು ವಿವರ ಒದಗಿಸುವುದು)

ಈ) ಒತ್ತುವರಿ ಮಾಡಿಕೊಂಡಿರುವ ರೈತಾಪಿ ವರ್ಗದವರ ವಿರುದ್ಧ ಅರಣ್ಯ ಅಧಿಕಾರಿಗಳು ಕೈಗೊಂಡಿರುವ ಕ್ರಮವೇನು?

ಉ) ಕ್ರಮ ಕೈಗೊಳ್ಳದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರವು ತಳೆದಿರುವ ನಿಲುವೇನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಕೊರಟಗೆರೆ ತಾಲ್ಲೂಕಿನ ಒಟ್ಟು ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣ 15715 ಎಕರೆ 11 ಗುಂಟೆ.

ಅರಣ್ಯ ಪ್ರದೇಶದಲ್ಲಿ ಬೆಳೆಸಿರುವ ಮರಗಳ ಅಂದರೆ, ಬೇವು, ಬಸರಿ, ನೀಲಗಿರಿ, ಹೊಂಗೆ ಅಕೇಶಿಯಾ, ನೇರಲೆ, ಸೀಗೆ, ಬಿದಿರು, ಅರಳಿ, ಆಲ, ಹೆಬ್ಬೇವು, ಹಿಪ್ಪೆ, ಹುಣಸೆ, ಜಾಲಿ, ಶ್ರೀಗಂಧ, ಹೊನ್ನೆ ಮತ್ತು ಇತರ ಮರಗಳು.

ಆ) ಕಳೆದ ಮೂರು ವರ್ಷಗಳಲ್ಲಿ ಕೊರಟಗೆರೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಂದರೆ 1999-2000, 2000-01 ಮತ್ತು 2001-02ನೇ ಸಾಲಿನಿಂದ ಕಟಾವು ಮಾಡಿರುವ ಮರಗಳಿಂದ ಬಂದಂತ ಆದಾಯ ಈ ಕೆಳಕಂಡಂತೆ ಇರುತ್ತದೆ.